ಬರಬಹುದು. ಆದ್ದರಿಂದ ಸರ್ಕಾರದವರು ಆತನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ವರದಿಯನ್ನು ತರಿಸಿ ನೋಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಒಂದು ವರದಿಯನ್ನು ತರಿಸಬೇಕಾದರೆ ಎಷ್ಟು ದಿವಸಗಳು ಬೇಕು. ನಾನು 15 ದಿವಸಗಳ ಹಿಂದೆಯೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಆದರೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ವರದಿಯನ್ನು ತರಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರು ವರದಿಯನ್ನು ತರಿಸಲಿ.

(ii) ಕುಂದಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರುಗಳ ಭರ್ತಿ

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನಲ್ಲಿ ಸರ್ಕಾರದವರು ಈ ವರ್ಷ ಸುಮಾರು 25 ಹೊಸ ಶಾಲೆಗಳನ್ನು ತೆರೆದಿದ್ದಾರೆ. ಆದರೆ ಆ ಶಾಲೆಗಳಿಗೆ ಪಕ್ಕದ ಹಳ್ಳಿಯ ಶಾಲೆಗಳಿಂದ ಡೆಪ್ಯುಟೇಷನ್ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿ ಈಗ ಉಪಾಧ್ಯಾಯರ ಕೊರತೆ ಇದೆ. ಆದರಲ್ಲಿ ಈಗ ಮಾನ್ಯ ಮಂತ್ರಿಗಳು ಹೊಸ ಶಾಲೆಗಳನ್ನು ತೆರೆದಿದ್ದಾರೆ. ಮತ್ತೆ ಆ ಶಾಲೆಗಳನ್ನು ನಡೆಸುವುದಕ್ಕೆ ಸರಿಯಾದಂಥ ಕಟ್ಟಡಗಳೂ ಸಹ ಇಲ್ಲದೆ ಜೋಪಡಿಗಳಲ್ಲಿ ನಡೆಸುತ್ತಿದ್ದಾರೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಉಪಾಧ್ಯಾಯರ ಕೊರತೆಯನ್ನು ಮತ್ತು ಶಾಲೆಗಳಿಗೆ ಕಟ್ಟಡಗಳು ಇಲ್ಲದೆ ಇರುವುದರಿಂದ ಮಾನ್ಯಮಂತ್ರಿಗಳು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಶಾಲೆಗಳನ್ನು ತೆರೆದಿರುವುದು ನಿಜ. ಆದರೆ ಬೇರೆ ಶಾಲೆಗಳಿಗೆ ಇರುವಂತೆ ಅಲ್ಲಿ ಕೂಡ ಉಪಾಧ್ಯಾಯರ ಕೊರತೆ ಇದೆ. ಮತ್ತೆ ನಾವು ಪ್ರೌಢ ಶಾಲೆಗಳಿಗೆ ಉಪಾಧ್ಯಾಯರನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಇವತ್ತು ಲೋಕಸೇವಾಆಯೋಗದವರು ಸಂದರ್ಶನವನ್ನು ನಡೆಸುತ್ತಿದ್ದಾರೆ. ಇನ್ನು ಒಂದು ತಿಂಗಳಲ್ಲಿ ಎಲ್ಲಾ ಪ್ರೌಢ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುತ್ತೇವೆ. ಮತ್ತೆ ಪ್ರಾಥಮಿಕ ಶಾಲೆಗಳಿಗೆ ಡೈರೆಕ್ಟ್ ಆಗಿ ಭರ್ತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

(iii) ಸಿಹಿಮೂತ್ರ ರೋಗಿಗಳಿಗೆ ಒದಗಿಸಬೇಕಾದ ಚಿಕಿತ್ಸಾ ಸೌಲಭ್ಯ

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 10–15 ಲಕ್ಷ ಜನ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ನಮ್ಮ ಶಾಸಕರ ಭವನದಲ್ಲಿರತಕ್ಕಂಥ ಶಾಸಕರೂ ಕೂಡ ಸುಮಾರು 50 ಪರ್ಸೆಂಟ್ ಶಾಸಕರು ಈ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ನಗರದಲ್ಲಿ ಕೂಡ ಸುಮಾರು 30 ಪರ್ಸೆಂಟ್ ಜನರು ಈ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ಹಳ್ಳಿಗಾಡು ಪ್ರದೇಶಗಳಲ್ಲಿ ಶೇಕಡ 3ರಷ್ಟು ಜನ ಈರೋಗದಿಂದ ನರಳುತ್ತಿದ್ದಾರೆ. ಆದರೆ ಈ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೇ ರೀತಿ ಸೌಲಭ್ಯಗಳು ಇಲ್ಲ. ತಮಗೆ ಹೇಳಬೇಕಾದರೆ, ಇವತ್ತು ಪಟ್ಟಣಗಳಲ್ಲಿ ಸುಮಾರು 20 ಪರ್ಸೆಂಟ್ ಜನರು ಈ ಖಾಯಿಲೆಯಿಂದ ನರಳುತ್ತಿದ್ದಾರೆ. ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಈ ಖಾಯಿಲೆಯಿಂದ ಸುಮಾರು 200 ಜನರು ಕಣ್ಣು ಕಳೆದುಕೊಂಡಿದ್ದಾರೆ. ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಕಲ್ಕತ್ತ, ಬಾಂಬೆ, ದೆಹಲಿ ಮತ್ತು ತ್ರೀವೆಂಡ್ರಂನಲ್ಲಿ ಕ್ಷಯರೋಗ, ಆರ್ಬುದರೋಗಗಳಿಗೆ ಇನ್‌ಟಿನ್‌ಸೀವ್ ಸ್ಪೆಷನ್ ಟ್ರೀಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಿದ್ದಾರೆ. ನಮ್ಮ ರಾಜ್ಯಸರ್ಕಾರ ಕೂಡ ಆ ರೀತಿಯ ಟ್ರೀಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಬೇಕು. ಮಾನ್ಯ ಸದಸ್ಯರಾದ ಮಾಣಿಕ್‌ರಾವ್ ಪಾಟೀಲ್‌ರವರು ಬಾಂಬೆಗೆ ಹೋಗಿ ಬಂದಿದ್ದಾರೆ. ನಮ್ಮಲ್ಲೂ ಕೂಡ ಅದರ ಬಗ್ಗೆ ಆಸಕ್ತಿವಹಿಸಿ ಸರ್ಕಾರ ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮಂತ್ರಿಗಳು ಸಹ ಪತ್ರ ಬರೆದಿದ್ದಾರೆ, ಅವರು ಊರಿನಲ್ಲಿಲ್ಲ. ಮಾನ್ಯ ಕಾನೂನು ಸಚಿವರು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತನ್ನಿ.